ಹಿನ್ನೆಲೆಯಲ್ಲಿ 2012–13 ಸಾಲಿನಲ್ಲಿ ನೇರ ನೇಮಕಾತಿ ಪಟ್ಟಿಯನ್ನು ಉಚ್ಚ ನ್ಯಾಯಾಲಯದ ತೀರ್ಮಾನದಂತೆ ಪರಿಷ್ಕರಿಸಲು ಕ್ರಮವಹಿಸಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು.

ರಾಜ್ಯದ ಮಾಹಿತಿ ತಂತ್ರಜ್ಞಾನ ಕಂಪನಿಗಳು

2735 (3638); ಶ್ರೀ ಮೋಹಿಯುದ್ಧೀನ್ ಬಾವಾ ಬಿ.ವಿ. (ಮಂಗಳೂರು ನಗರ ಉತ್ತರ)

ಅ) ರಾಜ್ಯದಲ್ಲಿರುವ ಮಾಹಿತಿ ತಂತ್ರಜ್ಞಾನ ಕಂಪನಿಗಳ ಒಟ್ಟು ಸಂಖ್ಯೆ ಎಷ್ಟು; ಖಾಸಗಿ–ಸರಕಾರಿ–ಅರೆ ಸರ್ಕಾರಿ ಕಂಪನಿಗಳೆಷ್ಟು;

ಆ) ಈ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಜಿನೀಯರ್‌ಗಳು ಮತ್ತು ಅವರ ಸರಾಸರಿ ವಯೋಮಾನ ಎಷ್ಟು;

ಇ) ಮಾಹಿತಿ ತಂತ್ರಜ್ಞಾನ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡಿಗರ ಸಂಖ್ಯೆ ಎಷ್ಟು (ವಿವರ ನೀಡುವುದು)?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ರಾಜ್ಯದಲ್ಲಿ ಸುಮಾರು 2500 ಖಾಸಗಿ ಐ.ಟಿ. ಕಂಪನಿಗಳಿವೆ.

ಆ) ಸುಮಾರು 9.5 ಲಕ್ಷ ಸಾಫ್ಟವೇರ್ ತಂತ್ರಜ್ಞರು ಈ ಕಂಪನಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರಲ್ಲಿ ಶೇ.35ರಷ್ಟು ಇಂಜಿನೀಯರ್‌ಗಳಾಗಿದ್ದು, ಅವರುಗಳ ಸರಾಸರಿ ವಯೋಮಾನ 27 ವರ್ಷ ಆಗಿರುತ್ತದೆ.

ಇ) 9.5 ಲಕ್ಷ ಉದ್ಯೋಗಿಗಳಲ್ಲಿ ಶೇ.58ರಷ್ಟು ಕನ್ನಡಿಗರಾಗಿರುತ್ತಾರೆ.